ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 36-42
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ದಲಿತ ಸಾಹಿತ್ಯ : ಭಾಷಿಕ ಸಂಬಂಧ

ಅನಿಲ್ ಕುಮಾರ್ ಎಂ. ಕೆ[1] ಮತ್ತು ಪ್ರೊ. ಚಲುವರಾಜು[2]
ಸಂಶೋಧನಾ ವಿದ್ಯಾರ್ಥಿ[1], ಪ್ರಾಧ್ಯಾಪಕರು[2]
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

Abstract:

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನವು ಒಂದು ವಿಶಿಷ್ಟ ಯುಗವಾಗಿದೆ. ಈ ಶತಮಾನದ ಆರಂಭದಲ್ಲಿ ಕನ್ನಡ ಸಾಹಿತ್ಯವು ವಿಶಿಷ್ಟಗತಿಯನ್ನು ಪಡೆದು ಹಲವು ಮುಖಗಳಲ್ಲಿ ವಿಕಾಸ ಹೊಂದಿತು. ಈ ವಿಕಾಸವು ಕಾವ್ಯ ಗದ್ಯ ಬರಹಗಳಲ್ಲಿ ಹಾಸುಹೊಕ್ಕಾಗಿ ಸಾಹಿತ್ಯಾಭಿವ್ಯಕ್ತಿಗೆ ಮಾಧ್ಯಮವಾಗಿರುವ ಭಾಷೆಯೂ ಒಂದಾಗಿದೆ. ಇಪ್ಪತ್ತನೆಯ ಶತಮಾನದಲ್ಲಿಯೇ ಈ ಕಾಲದಲ್ಲಿ ಕಾವ್ಯದ ಭಾಷೆ ಮತ್ತು ಛಂದಸ್ಸುಗಳಲ್ಲಿ ಹೊಸತನ ಮೂಡಿತು. ಇದಕ್ಕೆ ಮೂಲ ಪ್ರೇರಣೆ ಇಂಗ್ಲಿಷ್ ಸಾಹಿತ್ಯದಿಂದ ದೊರಕಿತು ಎಂದು ಹೇಳಬಹುದು. ಈ ಪ್ರೇರಣೆಯಿಂದ ಹಾಗೂ ಇಂಗ್ಲಿಷ್ ಸಾಹಿತ್ಯದ ಅನುಕರಣೆಯಿಂದ ಕನ್ನಡದಲ್ಲಿ ಹೊಸ ಹೊಸ ಪ್ರಕಾರಗಳು ಹುಟ್ಟಿದವು. ಅವುಗಳಲ್ಲಿ ಭಾವಗೀತೆ, ಸಾನೆಟ್. ಖಂಡಕಾವ್ಯ. ಕಥನಕಾವ್ಯ, ಮಹಾಕಾವ್ಯ ಇನ್ನು ಗದ್ಯದಲ್ಲಿ ಸಣ್ಣಕಥೆ, ಕಾದಂಬರಿ, ಪ್ರಬಂಧ, ಹರಟೆ, ಅಂಕಣ, ಪ್ರವಾಸ. ಜೀವನ ಚರಿತ್ರೆ, ವ್ಯಕ್ತಿಚಿತ್ರ. ಆತ್ಮಕಥನ ವೈಚಾರಿಕ ಮತ್ತು ವಿಮರ್ಶೆ ಮುಂತಾದವು. ಅವುಗಳ ವಸ್ತು, ನಿರೂಪಣೆ, ಶೈಲಿಗಳಲ್ಲಿ ಭಾಷಿಕವಾಗಿ ಹೊಸತನವನ್ನು ಪ್ರಯೋಗಿಸಿ ಬೆಳೆದುಕೊಂಡು ಬಂದವು. ಕಾವ್ಯದಲ್ಲಿ ಅನೇಕ ಹೊಸ ಹೊಸ ಮಟ್ಟುಗಳು ಕೂಡ ಭಾಷಿಕ ಪ್ರಯೋಗದಿಂದ ಜನಜನಿತವಾಗಿವೆ.

Keywords: *ದಲಿತ – ಬಂಡಾಯ ಸಾಹಿತ್ಯ, ಭಾಷಿಕ ಸಂಬಂಧ, ಕಾವ್ಯ ಮತ್ತು ಭಾಷೆ.*

ಪೀಠಿಕೆ

ಮಾನವನ ಅತ್ಯಂತ ಮಹತ್ವದ ಸಾಧನೆಯಲ್ಲಿ ಭಾಷೆಯನ್ನು ಸಿದ್ಧಿಸಿಕೊಂಡಿದ್ದಾಗಿದೆ ಎನ್ನಬೇಕು. ಭಾಷೆ ಮಾನವನ ಸಾಧನೆ. ಭಾಷೆ ನಿಂತ ನೀರಲ್ಲ. ಅದು ನಿರಂತರವಾಗಿ ಪ್ರವಹಿಸುವ ನದಿ ಇದ್ದಂತೆ. ನದಿಯು ಕಾಲಕಾಲಕ್ಕೆ ತನ್ನ ಪಾತ್ರವನ್ನು ಬದಲಿಸುವಂತೆ ಭಾಷೆಯೂ ತನ್ನ ರೂಪವನ್ನು ಬದಲಿಸಿಕೊಂಡು ಬೆಳೆಯುತ್ತದೆ. ಹೀಗೆ ಬೆಳೆಯುವ ಭಾಷೆಯು ಜಗತ್ತಿನ ಎಲ್ಲ ಜ್ಞಾನ ಶಾಖೆಗಳ ವಾಹಕವಾಗಿದೆ. ಅದು ಎಲ್ಲ ಜ್ಞಾನ ಶಾಖೆಗಳ ಬೆಳಕೂ ಆಗಿದೆ. ಏಕೆಂದರೆ ನಾವಿಂದು ಯಾವುದಾದರೂ ವಿಷಯದ ಬಗ್ಗೆ ತಿಳಿದುಕೊಳ್ಳಬೇಕಾದರೆ, ಬೇರೆ ಬೇರೆ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕಾದರೆ, ಭಾಷೆಯ ನೆರವು ನಮಗೆ ಬೇಕೆಬೇಕು.

ಹೀಗಾಗಿ ಭಾಷೆ ನಮಗೆ ಏನೆಲ್ಲವೂ ಆಗಿದೆ. ಅದು ನಮ್ಮನ್ನು ಸುಸಂಸ್ಕೃತರನ್ನಾಗಿಸುವಲ್ಲಿ, ಬುದ್ಧಿವಂತರಾಗಿಸುವಲ್ಲಿ ಭಾಷೆಯ ಪಾತ್ರ ಮಹತ್ವದ್ದಾಗಿದೆಯೆಂಬುದರಲ್ಲಿ ಯಾವುದೇ

Please cite this article as: ಅನಿಲ್ ಕುಮಾರ್ ಎಂ.ಕೆ. ಮತ್ತು ಚಲುವರಾಜು. (2024). ದಲಿತ ಸಾಹಿತ್ಯ : ಭಾಷಿಕ ಸಂಬಂಧ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 36–42

ಅತಿಶಯೋಕ್ತಿಯೇನಲ್ಲ. ಇದಕ್ಕೆ ಕನ್ನಡ ಭಾಷೆಯೂ ಹೊರತಾಗಿಲ್ಲ.

"ಭಾಷೆ ಮೂಲತಃ ಭಾಷ್–ಎಂಬ ಸಂಸ್ಕೃತ ಧಾತುವಿನಿಂದ ಬಂದಿದೆ"[1]ಯೆಂದು ಭಾಷಾ ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಅದಕ್ಕೆ ಬೆಳಕು, ಹೊಳೆ ಪ್ರಕಾಶಿಸು ಎಂಬರ್ಥ ಹೇಳಲಾಗುತ್ತದೆ. ಮನುಷ್ಯನು ಅದಿಮದಲ್ಲಿ ನಿಸರ್ಗದಲ್ಲಿ ತಾನು ಕಂಡ ಅನುಭವಿಸಿದ ಅನುಭವಗಳನ್ನು, ಭಾವನೆಗಳನ್ನು. ಅನಿಸಿಕೆಗಳನ್ನು ಇನ್ನೊಬ್ಬರಿಗೆ ತಿಳಿಸುವ ಸಲುವಾಗಿ ಭಾಷೆಯನ್ನು ಕಂಡುಕೊಂಡನು ಎಂದು ಹೇಳಬಹುದು. ಪ್ರಾಚೀನ ಕಾಲದಲ್ಲೇ ನಮ್ಮ ಭಾಷಾ ಪಂಡಿತರು. ವೈಯಾಕರಣಿಗಳು, ಭಾಷಾಮೀಮಾಂಸಕರು ಭಾಷೆಯ ಕುರಿತಾಗಿ ಅನೇಕ ಚರ್ಚೆಗಳನ್ನು ಮಾಡುತ್ತ ಬಂದಿರುವರು. ಭಾಷೆ ಮನುಷ್ಯನ ವ್ಯವಹಾರಕ್ಕಾಗಿದ್ದರೂ ಅದು ಅವನ ಪಾಂಡಿತ್ಯ, ಲೋಕಜ್ಞಾನ. ಸಾಹಿತ್ಯಜ್ಞಾನದ ವೃದ್ಧಿಗೂ ಸಾಧನವಾಗಿದೆಯೆಂದು ಹೇಳಬಹುದಾಗಿದೆ. ಪ್ರಾಚೀನ ಮೀಮಾಂಸಕರು ಶಬ್ದವನ್ನು ಪ್ರಮಾಣವೆಂದು ಸ್ವೀಕರಿಸಿ ಜ್ಞಾನದ ಸಾಧನಗಳ ನಿರೂಪಣೆಯಾಗಿ ಬಳಸಿದರು. ಶಬ್ದದಿಂದ ಅಥವಾ ಭಾಷೆಯಿಂದ ನಾವು ಗಳಿಸುವ ಜ್ಞಾನವು ಅಪಾರ. ಪ್ರತ್ಯಕ್ಷ ಮತ್ತು ಅನುಮಾನಗಳ ಕ್ಷೇತ್ರವು ಮಿತವಾದದ್ದು, ಶಬ್ದವು ಒಪ್ಪಿಕೊಂಡರೆ ಜ್ಞಾನದ ಕ್ಷೇತ್ರವು ವಿಸ್ತರಿಸುತ್ತವೆಯೆಂಬುದು ಅವರ ಅಭಿಪ್ರಾಯ.

ಹನ್ನೆರಡನೆಯ ಶತಮಾನದ ಶ್ರೇಷ್ಠ ಜ್ಞಾನಿ, ವಚನಕಾರ ಅಲ್ಲಮಪ್ರಭು, ಭಾಷೆಯೆಂದರೆ 'ಮಾತು' ಎಂದು ಹೇಳುತ್ತ ಅದನ್ನು ಜ್ಯೋತಿರ್ಲಿಂಗಕ್ಕೆ ಹೋಲಿಸುತ್ತಾನೆ. ಅದರಂತೆ ಬಸವಣ್ಣ ಕೂಡ ಭಾಷೆಯನ್ನು ಮುತ್ತಿನ ಹಾರ, ಸ್ಪಟಿಕದ ಸಲಾಕೆ, ದೀಪ್ತಿಗೆ ಹೋಲಿಸಿರುವುದನ್ನು ನೋಡುತ್ತೇವೆ. "ನಾವು ನಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಪೂರೈಸಿಕೊಳ್ಳಬೇಕಾದರೆ ಮಾತುಗಳನ್ನೇ ಭಾಷೆಯನ್ನು ಅವಲಂಬಿಸಬೇಕಾಗುವುದು. ಮಾತು ಮಾನವನ ಬದುಕಿಗೆ ಬೆಳಕು ನೀಡುವಂಥದಾಗಿದೆ".[2] ಅದಕ್ಕೆ ಸಂಸ್ಕೃತ ಪ್ರಸಿದ್ಧ ಮೀಮಾಂಸಕನಾದ ದಂಡಿಯು ತನ್ನ ಪ್ರಸಿದ್ಧ ಉಕ್ತಿಯೊಂದರ ಮೂಲಕ ಮಾನವನ ವ್ಯವಹಾರಕ್ಕೆ, ಸಾಹಿತ್ಯಾಭಿವ್ಯಕ್ತಿಗೆ ಇರುವ ಭಾಷೆಯ ಅವಶ್ಯಕತೆಯನ್ನು ಮನಗಾಣಿಸುತ್ತಾನೆ

"ಇದಮಂದಂ ತಮಃ ಕೃತ್ಸ್ನಂ ಜಾಯೇತ ಭುವನತ್ರಮಂ।

ಯದಿ ಶಬ್ದಾಹ್ವಯಂ ಜ್ಯೋತಿರಾ ಸಂಸಾರಾನ್ನ ದೀಪ್ಯತೇ" [3]

ಭಾಷೆಯೆಂಬುದು ಜ್ಯೋತಿಯು ಜೀವನದಲ್ಲಿ ಬೆಳಗದೇ ಹೋಗಿದ್ದರೆ ಮೂರು ಲೋಕಗಳೆಲ್ಲವೂ ಕತ್ತಲೆಯಲ್ಲಿ ಮುಳುಗಿರುತ್ತಿದ್ದವು ಎಂಬುದು ಈ ಉಕ್ತಿಯ ಅರ್ಥವಾಗಿದೆ. ಇಲ್ಲಿ ದಂಡಿಯು ಮಾನವನ ಭಾಷೆಯ ಮಹತ್ವವನ್ನು ಮನಗಾಣಿಸಿದ್ದಾನೆ ಎಂದು ಹೇಳಬೇಕಾಗುತ್ತದೆ. ನಿಜವಾಗಿಯೂ ಭಾಷೆ ನಮ್ಮ ಬದುಕು ಮತ್ತು ಬರೆಹದ ಸಾಧನವೇ ಆಗಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಭಾಷಾವಿಜ್ಞಾನಿಗಳು ಭಾಷೆ ಒಂದು ಅಭಿವ್ಯಕ್ತಿಯ ಸಂಕೇತವೆಂದು ಕರೆಯುತ್ತಾರೆ. ಈ ಸಂಕೇತವು ಒಂದು ಸಾಮಾಜಿಕ. ಸಾಂಸ್ಕೃತಿಕ ವ್ಯವಸ್ಥೆಯಾಗಿರುತ್ತದೆ. ಜಗತ್ಪಸಿದ್ಧ ಭಾಷಾವಿಜ್ಞಾನಿಗಳಾದ ಬ್ಲಾಕ್ ಮತ್ತು ಟ್ರೇಗರ್ ಅವರು ಭಾಷೆಯ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ವ್ಯಾಖ್ಯಾನಿಸಿದ್ದು ಇವರ ಈ ವ್ಯಾಖ್ಯಾನ ತುಂಬಾ ಪ್ರಸಿದ್ಧವಾಗಿದೆ. ಆ ವ್ಯಾಖ್ಯೆ ಹೀಗಿದೆ.

"ಭಾಷೆ ಎಂಬುದು ಯಾದೃಚ್ಛಿಕ ಮೌಖಿಕಧ್ವನಿ ಸಂಕೇತಗಳ ಒಂದು ವ್ಯವಸ್ಥೆ: ಸಮುದಾಯದಲ್ಲಿ ಇದರಿಂದ ಸಂಪರ್ಕ ಸಹಕಾರ ಉಂಟಾಗುವುದು ಎಂದರ್ಥ".[4] ಭಾಷೆಯೊಂದು ವ್ಯವಸ್ಥೆ, ಅದು ಧ್ವನಿ ಸಂಕೇತಗಳ ವ್ಯವಸ್ಥೆ, ಮಾನವನ ಮೌಖಿಕ ಧ್ವನಿ ಸಂಕೇತಗಳ ವ್ಯವಸ್ಥೆ, ಸಾಮಾಜಿಕ ವ್ಯವಹಾರಕ್ಕೆ ಉಂಟಾದ ಸಾಧನ. ಮಾನವ ಎರಡು ರೀತಿಯಲ್ಲಿ ತನ್ನ ಧ್ವನಿಗಳನ್ನು ಅರ್ಥಕ್ಕೆ ಹೊಂದಿಸಿಕೊಂಡು ವಸ್ತುವನ್ನು ಗುರುತಿಸಲು ಪ್ರಯತ್ನಿಸುವಂತೆ ಕವಿ

ಅಥವಾ ಸಾಹಿತಿಯು ತನ್ನ ಅಭಿವ್ಯಕ್ತಿಯನ್ನು ಸಂಕೇತ, ಪ್ರತಿಮೆ, ರೂಪಕ, ಅಲಂಕಾರ ರಸಧ್ವನಿ ಮೂಲಕ ಹೇಳಲು ಪ್ರಯತ್ನಿಸುತ್ತಾನೆ. ಕಾವ್ಯ ಅಥವಾ ಇತರ ಕೃತಿಗಳಲ್ಲಿ ಭಾಷೆ ರಚನೆಯ ಸ್ವರೂಪವನ್ನು ವಿಶ್ಲೇಷಿಸುವಾಗ ಅವುಗಳ ಅಭ್ಯಾಸಿಯು ಇವುಗಳನ್ನು ಗಮನಿಸುತ್ತಾನೆ ಎನ್ನಬೇಕು.

ಜಗತ್ತಿನಾದ್ಯಂತ ಒಂದೇ ಭಾಷೆ ಇಲ್ಲ. ಸಾವಿರಾರು ಭಾಷೆಗಳು, ಉಪಭಾಷೆಗಳು, ಪ್ರಾದೇಶಿಕ ಭಾಷೆಗಳು ಜನರಲ್ಲಿ ಬಳಕೆಯಲ್ಲಿವೆ. ಉದಾಹರಣೆಗೆ ಕನ್ನಡವನ್ನೇ ತೆಗೆದುಕೊಂಡು ನೋಡಲಾಗಿ ಪ್ರಾಚೀನ ಕನ್ನಡ, ಮಧ್ಯಕಾಲೀನ ಕನ್ನಡ ಮತ್ತು ಆಧುನಿಕ ಕನ್ನಡವೆಂತಲೂ 'ಕಾಲವಾಚವಾಗಿ ಹಾಗೆಯೇ ಶಾಸನಗಳಲ್ಲಿನ ಕನ್ನಡ ಆಡುಗನ್ನಡ ಇದನ್ನು ಪ್ರಾದೇಶಿಕವಾಗಿ ಮೈಸೂರು ಪ್ರದೇಶದ ಮಂಗಳೂರು ಕನ್ನಡ, ಧಾರವಾಡ ಕನ್ನಡ, ಬೆಂಗಳೂರು ಕನ್ನಡ, ಚಿತ್ರದುರ್ಗ ಕನ್ನಡವೆಂಬ ಒಳ ಪ್ರಭೇದ ಭಾಷೆಗಳನ್ನು ಕಾಣುತೇವೆ. ಇದಲ್ಲದೆ ಮತ್ತೆ ಪ್ರಭೇದ ಭಾಷೆ ವ್ಯಕ್ತಿ ಭಾಷೆಯೂ ವಿಭಿನ್ನವೂ ವಿಶಿಷ್ಟವೂ ಆಗಿರುವುದು. ಒಂದೇ ಪ್ರದೇಶದಲ್ಲಿ ವಾಸಿಸುವ ಜನರು ತಮ್ಮ ವಲಯದಲ್ಲಿಯೇ ಭಿನ್ನ ಭಿನ್ನ ಭಾಷೆಗಳನ್ನು ಮಾತನಾಡುತ್ತಾರೆ. ಇದನ್ನು ಸಾಮಾಜಿಕವಾಗಿ ನೋಡಲಾಗುತ್ತದೆ. ಈ ಭಾಷಾ ಭಿನ್ನತೆಗಳಿಗೆ ಕಾರಣಗಳು ಅನೇಕ. ಅವು ಪ್ರಕೃತಿ, ಸಮಾಜ, ಪ್ರದೇಶಗಳನ್ನು ಹೊಂದಿ ಬದಲಾವಣೆಯಾಗುತ್ತ ಬೆಳೆಯುತ್ತವೆ. ಒಂದೇ ಪ್ರದೇಶದಲ್ಲಿ ಒಂದೇ ಪರಿಸರದಲ್ಲಿ ಎರಡು, ಮೂರು ಅಥವಾ ಅನೇಕ ಭಾಷೆಗಳು ಒಟ್ಟಿಗೆ ಬಳಕೆಯಲ್ಲಿರುವುದನ್ನು ಕಾಣಲಾಗುತ್ತದೆ. ಇದಕ್ಕೆ ಉದಾಹರಣೆಯೆಂದರೆ ಬಹು ಧಾರ್ಮಿಕ, ಬಹು ಸಾಂಸ್ಕೃತಿಕ, ಬಹುಭಾಷಿಕ ನೆಲೆಯಾದ ಕೆಲವು ಜಿಲ್ಲೆಯಲ್ಲಿಯೇ ನಾವು ಅನೇಕ ಭಾಷೆಗಳನ್ನು ಜನರು ದಿನನಿತ್ಯದಲ್ಲಿ ಬಳಸುತ್ತಿರುವುದನ್ನು ಕಾಣುತ್ತೇವೆ. ಬಹುಭಾಷಿಕ ಪ್ರಯೋಗ ಆಡುಮಾತಿನಲ್ಲಿರುವಂತೆ ಈ ಪ್ರದೇಶದ ಕಾವ್ಯ, ಕಥೆ, ಕಾದಂಬರಿ, ನಾಟಕ ಮೊದಲಾದ ಸಾಹಿತ್ಯ ರಚನೆಗಳಲ್ಲಿಯೂ ಕಾಣಬಹುದಾಗಿದೆ.

ಕವಿ ಅಥವಾ ಸಾಹಿತಿಯೂ ಒಬ್ಬ ಸಾಮಾಜಿಕ ಜೀವಿ, ಹೀಗಾಗಿ ಆತನ ಮೇಲೆ ಸಮಾಜದ ಅನೇಕ ಘಟನೆ, ಪ್ರಸಂಗಗಳು ಆತನ ಮೇಲೆ ಪ್ರಭಾವವನ್ನುಂಟು ಮಾಡಿರುತ್ತವೆ. ಸಮಾಜದಿಂದಲೇ ತನ್ನ ಬರವಣಿಗೆಗೆ ವಸ್ತುವನ್ನು ಆಯ್ದುಕೊಳ್ಳುವ ಕವಿ ಅಥವಾ ಸಾಹಿತಿಯು ಸಮಾಜದಲ್ಲಿ ಬಳಕೆಯಲ್ಲಿರುವ ಶಬ್ದ, ಪದ, ನುಡಿಗಟ್ಟು, ಪ್ರತಿಮೆ, ರೂಪಕ, ಗಾದೆ, ನಾಣ್ಣುಡಿ ಮುಂತಾದವುಗಳನ್ನು ಬಳಸಿಕೊಂಡು ರಚನೆ ಮಾಡಿರುತ್ತಾನೆ. ಹೀಗಾಗಿ ಕವಿ, ಬರಹಗಾರರ ಕೃತಿಗಳನ್ನು ಭಾಷಿಕ ನೆಲೆಯಲ್ಲಿ ನೋಡುವುದು ಹೆಚ್ಚಿನ ಪ್ರಯೋಜನವಿದೆ.

ಕಾವ್ಯ ಮತ್ತು ಭಾಷೆ

ಭಾಷೆ ಒಂದು ಜನಸಮುದಾಯದ ಆಲೋಚನಾ ಶಕ್ತಿ ಅಥವಾ ಭಾವನಾಶಕ್ತಿಯ ಅಭಿವ್ಯಕ್ತಿಯ ಸಾಧನ, ತನ್ನೊಳಗಿನ ಅನುಭವಗಳನ್ನು ಆಲೋಚನೆಗಳನ್ನು ಅನಿಸಿಕೆಗಳನ್ನು ಕವಿಯಾದವನು ತಕ್ಕ ಭಾಷಾ ಮಾಧ್ಯಮದ ಮೂಲಕ ಸಂವಹನ ಸಾಧನವನ್ನಾಗಿಸುವ 'ಕ್ರಿಯೆಯನ್ನು ಮಾಡುತ್ತಾನೆ. "ಈ ಅಭಿವ್ಯಕ್ತಿ ಕವಿಯಾದವನ ಪಾಲಿಗೆ ಒಂದು ಸಹಜವೂ, ಸ್ವತಂತ್ರವೂ ಮತ್ತು ಅನಿವಾರ್ಯವೂ ಆದ ವ್ಯಾಪಾರವಾಗಿರುತ್ತದೆ"[5] ಎನ್ನುತ್ತಾರೆ. ಡಾ. ಜಿ.ಎಸ್.ಶಿವರುದ್ರಪ್ಪನವರು, ಅವರು ಆತನಿಗೆ ಅನಿಸಿದ ವೇದನೆ–ಸಂವೇದನೆಗಳನ್ನಷ್ಟೇ ನಿವೇದನೆಯ ಅಗತ್ಯವೂ ಹಾಗೂ ಅನಿವಾರ್ಯವೂ ಆಗಿರುತ್ತದೆ. ಆದ್ದರಿಂದ ಆಂಗ್ಲ ವಿದ್ವಾಂಸರಾದ ವರ್ಡ್ಸ್ ವರ್ತ ಹೇಳುವಂತೆ ಕಾವ್ಯ ನಮ್ಮೊಳಗಿನ ಭಾವನೆ–ಸಂವೇದನೆಗಳ ಒತ್ತಡಗೊಂಡು ಹೊರಚಲ್ಲುವಿಕೆ ಮತ್ತು ಮುಖಾಮುಖಿಯಾಗುವಿಕೆಯಲ್ಲಿ ಹುಟ್ಟುತ್ತದೆ ಎಂಬ ಮಾತು ಹೇಳಿರುವುದನ್ನು ಕಾಣುತ್ತೇವೆ.

ಭಾಷೆ ಮತ್ತು ವಸ್ತುವಿನ ಬಗೆಗಿನ ನಿಲುವು ಕನ್ನಡದಲ್ಲಿ ಹಿಂದಿನ ಕಾಲದಲ್ಲಿಯೇ ಪಂಪ, ರನ್ನ

ಹಾಗೂ ವಚನಕಾರರಲ್ಲಿ ಹಾಗೂ ಅವರ ಪರಂಪರೆಯ ಹೆಜ್ಜೆಯಲ್ಲಿಯೇ ನಡೆದ ಹರಿಹರ, ರಾಘವಾಂಕ ಮತ್ತು ಆನಂತರದ ಕೀರ್ತನಕಾರರಲ್ಲಿ ತತ್ವಪದಕಾರರಲ್ಲಿ ಹಾಗೆಯೇ ಆಧುನಿಕ ಕನ್ನಡ ನವೋದಯ, ಪ್ರಗತಿಶೀಲ, ನವ್ಯ ಮತ್ತು ನವೋತ್ತರ ಸಂದರ್ಭದ ದಲಿತ ಬಂಡಾಯ ಕವಿಗಳಲ್ಲಿ ಕಾಣುತ್ತೇವೆ.

ಹೊಸ ಭಾಷಿಕ ಪರಿಭಾಷೆಯಲ್ಲಿ ದಲಿತ ಕಾವ್ಯ

ಪ್ರಾಚೀನ ಛಂದೋಬಂಧಗಳನ್ನು ನಿರಾಕರಿಸಿದ ಆಧುನಿಕರು ಅಷ್ಟೇ ನಿಯತವಾದ ಛಂದೋಲಯಗಳನ್ನು ಮುಂದುವರಿಸಿಕೊಂಡು ಬಂದಿರುವುದನ್ನು ನವೋದಯ ಕಾವ್ಯ ಸಂದರ್ಭದಲ್ಲಿ ಕಾಣುತ್ತೇವೆ. ಅದೇ ನವ್ಯಕವಿಗಳು ಕಾವ್ಯಕ್ಕೆ ಹೊಸ ಪ್ರತಿಮಾತ್ಮಕ, ರೂಪಕ, ಭಾಷಿಕ ಸ್ವರೂಪವನ್ನು ನೀಡಿದರು. ಆದರೆ, ನವ್ಯದ ನಂತರದಲ್ಲಿ ಕಾಣಿಸಿಕೊಂಡ ದಲಿತ ಕಾವ್ಯವು ಸಾಮಾಜಿಕ ಪರಿಭಾಷೆಯಲ್ಲಿ ಕಾವ್ಯರಚನೆ ಮಾಡತೊಡಗಿದರು. ಮಾತನ್ನು ಕಾವ್ಯವಾಗಿಸಿದರು. ಅದರಲ್ಲಿ ರೂಪಕ ಪ್ರತಿಮೆಗಳನ್ನು ಸೌಮ್ಯ ಆಕ್ರೋಶಭರಿತ ಭಾಷೆಯಲ್ಲಿ ಪಡಿಮೂಡಿಸಿದರು. ಎನ್ನಬೇಕು.

ಬಹುಮುಖ್ಯವಾಗಿ ಶ್ರೇಣಿಕೃತ ಸಮಾಜದ ನಿರ್ನಾಮ ಸಂಕಲ್ಪವು ದಲಿತ ಕವಿಗಳದ್ದಾಗಿತ್ತು. ಬದುಕಿನ ಎಲ್ಲ ನೆಲೆಗಳಿಂದಲೂ ಕಾವ್ಯವನ್ನು ಕಟ್ಟಬೇಕು ಎಂಬ ಉತ್ಸಾಹ, ಅನಿವಾರ್ಯತೆಯನ್ನು ದಲಿತ ಕವಿಗಳು ಹೆಗಲೇರಿಸಿಕೊಂಡರು. ಕಳೆದ 70ರ ದಶಕದಲ್ಲಿ ಬಂಡಾಯ ಚಳವಳಿಯ ಜೊತೆಗೆ ಸರಿಜೋಡಿಯಾಗಿ ನಿಂತು ಕನ್ನಡ ಕಾವ್ಯದಲ್ಲಿ ಮೊದಲ ಬಾರಿಗೆ ಜಾತಿಯ ನೆಲೆಯಿಂದ ಗುರುತಿಸಿಕೊಂಡು ಬಂದರು. ಜಾತಿಯ ಮುಖೇನೇ ತನ್ನನ್ನು ಗುರುತಿಸಿಕೊಂಡು ದಲಿತ ಕಾವ್ಯ ಕನ್ನಡ ಸಾಹಿತ್ಯವನ್ನು ಸಾಮಾಜಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳ ಅನಿವಾರ್ಯತೆಯನ್ನು ವ್ಯಕ್ತಪಡಿಸಿತು. ಇದಕ್ಕೆ ಸ್ಪಷ್ಟ ಉದಾಹರಣೆಯೆಂದರೆ ಡಾ. ಸಿದ್ದಲಿಂಗಯ್ಯನವರ ಕಾವ್ಯ ಎನ್ನಬೇಕು.

"ದಲಿತರು ಬಂದರು ದಾರಿಬಿಡಿ,
ದಲಿತರ ಕೈಗೆ ರಾಜ್ಯ ಕೊಡಿ"

ಎಂದು ಹೇಳುವ ಮೂಲಕ ದುಡಿಯುವ ಜನರಿಗೆ ಸಾಮಾಜಿಕವಾಗಿ ತುಳಿತಕ್ಕೊಳಗಾದ ಜನರಿಗೆ ಶೋಷಣೆಯ ಬೆಂಕಿಯಲ್ಲಿ ಬೆಂದು ನೊಂದವರಿಗೆ ಅಧಿಕಾರ ಬಂದಾಗ ಮಾತ್ರ ಸರ್ವರಿಗೂ ಸಾಮಾಜಿಕ ಹಾಗೂ ರಾಜಕೀಯ ನ್ಯಾಯ ಸಿಗಲು ಸಾಧ್ಯ ಎಂದು ಹೇಳುವ ಮೂಲಕ ಇಡೀ ದಲಿತ ಸಮುದಾಯದಲ್ಲಿ ಶೋಷಣೆಯಿಂದ ಮುಕ್ತವಾಗುವ ಪ್ರಜ್ಞೆಯನ್ನು ಮೂಡಿಸಿದರು ಎನ್ನಬೇಕು.

ಸ್ವಾತಂತ್ರ್ಯ ಲಭಿಸಿದ ಸುಮಾರು ಮೂರು ದಶಕಗಳಲ್ಲಿಯೇ ಸ್ವಾತಂತ್ರ್ಯಪೂರ್ವದಲ್ಲಿ ಕಟ್ಟಿಕೊಂಡಿದ್ದ ಪರಿವರ್ತನೆಗಳು ರೂಪದಲ್ಲಿ ಮಾತ್ರ ಬದಲಾವಣೆ ಹೊಂದಿದವು. ಆದರೆ ಆಚರಣೆಯಲ್ಲಿ ಮಾತ್ರ ಅದೇ ವರ್ಣ, ವರ್ಗ, ಜಾತಿ, ಲಿಂಗ ತಾರತಮ್ಯ ಹಾಗೇ ಉಳಿದುಕೊಂಡು ಬಂದಿತು. ಇದು ಪ್ರಗತಿಪರ ಚಿಂತಕರು, ಕವಿ, ಸಾಹಿತಿಗಳಲ್ಲಿ ಚಿಂತನೆಗೀಡು ಮಾಡಿತು. ಇದರ ಜೊತೆಗೆ 70ರ ದಶಕದಲ್ಲಿ ರಾಷ್ಟ್ರ, ರಾಜ್ಯದಲ್ಲಿ ನಡೆದ ವಿದ್ಯಮಾನಗಳು ತುರ್ತುಪರಸ್ಥಿತಿ ಕರಾಳ ಶಾಸನವು ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಿತು. ಬಸವಲಿಂಗಪ್ಪನವರ ಕನ್ನಡ ಸಾಹಿತ್ಯ ಭೂಸಾ ಎಂಬ ಹೇಳಿಕೆ, ಧರ್ಮಸ್ಥಳ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಗೋಷ್ಠಿ ಇಡಲು ನಿರಾಕರಣೆ ಇವೆಲ್ಲವೂ ಕನ್ನಡ ಸಾಹಿತ್ಯದಲ್ಲಿ ಬಹು ದೊಡ್ಡ ಬದಲಾವಣೆಗಳಿಗೆ ಕಾರಣವಾದವು. ಪ್ರಗತಿಪರ ಚಿಂತನೆಯ ಅನೇಕರು ವಿಭಿನ್ನ ರೀತಿಯ ಸಾಹಿತ್ಯಕ ಭಾಷೆಯಲ್ಲಿ ಬರೆಯಲು ತೊಡಗಿದರು. ರಾಜ್ಯಮಟ್ಟದಲ್ಲಿ ಡಾ. ಸಿದ್ಧಲಿಂಗಯ್ಯನವರು ಕಾವ್ಯಕ್ಕೆ ಹೊಸ ಭಾಷಿಕ ನೆಲೆಯನ್ನು ತಂದುಕೊಟ್ಟರೆ, ದೇವನೂರ ಮಹಾದೇವ, ಬರಗೂರ ರಾಮಚಂದ್ರಪ್ಪ ಮುಂತಾದವರು ಗದ್ಯಕ್ಕೆ ಹೊಸ ಭಾಷಾ ಅಭಿವ್ಯಕ್ತಿಯನ್ನು ಕಲ್ಪಿಸಿಕೊಟ್ಟರು. ಇವರುಗಳ ಕಾವ್ಯ, ಸಾಹಿತ್ಯ, ಭಾಷಿಕ ಅಭಿವ್ಯಕ್ತಿ ಕ್ರಮ, ಶೈಲಿ ಉಳಿದಡೆಯಲ್ಲಿಯಂತೆ ದಲಿತಕವಿ, ಸಾಹಿತಿಗಳ

ಮೇಲೂ ಪ್ರಭಾವವಾಯಿತು. ಅನೇಕರು ಇಲ್ಲಿಯೂ ಕಾವ್ಯ ಗದ್ಯಕ್ಕೆ ಹೊಸ ಹೊಸ ಪ್ರತಿಮೆ ರೂಪಕ, ನುಡಿಗಟ್ಟು, ವ್ಯಂಗೋಕ್ತಿ, ಪಡೆನುಡಿ ಹಾಗೂ ಅನ್ಯಭಾಷಿಕ ಪದಪುಂಜಗಳನ್ನು ಪ್ರಯೋಗಿಸಿದ್ದನ್ನು ಬಹು ಮುಖ್ಯವಾಗಿ ಕಾಣುತ್ತೇವೆ. ಇದಲ್ಲದೆ ದಲಿತ ಕಾವ್ಯದ ಮೇಲೆ ವಚನಸಾಹಿತ್ಯ ತತ್ತಪದ ಸಾಹಿತ್ಯ, ಡಾ. ಅಂಬೇಡ್ಕರ್ ಅವರ ಬರಹ ಭಾಷಣಗಳು ಅವರ ಚಿಂತನೆಗಳ ಪ್ರಭಾವವನ್ನು ಕಾಣದೆ ಇರಲಾರೆವು, ಭಾವ ಪರವಶತೆಯ ನವೋದಯವನ್ನು ದಾಟಿ, ಜನಪರ ನಿಲುವಿನ ಪ್ರಗತಿಶೀಲ ಕಾವ್ಯವನ್ನು ಮೀರಿ, ಚಿಂತನಪರ ನವ್ಯ ಕಾವ್ಯವನ್ನು ಹಿಂದಕ್ಕೆ ತಳ್ಳಿ ಬೆಳೆದ ದಲಿತಕಾವ್ಯ ಬೀದಿಮಾತಿನ ಆಡುಭಾಷೆಯ ಜನಸಾಮಾನ್ಯರ ಕಾವ್ಯವಾಗಿ ಹೊರಹೊಮ್ಮಿತು. ಕಾವ್ಯ. ಜನ. ಭಾಷೆ, ಜನಪರ ಧೋರಣೆಯನ್ನೇ ತನ್ನ ಜೀವಸತ್ವವಾಗಿಸಿಕೊಂಡಿತು. ಸ್ವಾತಂತ್ರ್ಯದ ಸಮಾನತೆ, ಮಾನವೀಯ ನ್ಯಾಯ, ಅನುಕಂಪ ಮುಂತಾದ ಸಾಹಿತ್ಯದ ಚಿರಂತನ ಮೌಲ್ಯಗಳನ್ನು ದಲಿತ ಕಾವ್ಯ ನೂತನ ಭಾಷೆಯಲ್ಲಿ ಪ್ರತಿಪಾದಿಸಿತು.

ದಲಿತ ಕವಿಗಳು ಜನಸಾಮಾನ್ಯರಿಗೂ ಅರ್ಥವಾಗುವ, ಸಂವಹನವಾಗುವ ರೀತಿಯಲ್ಲಿ ಗೇಯತೆಯ ಮೂಲಕ ಕಾವ್ಯವನ್ನು ರಚಿಸಿತು. ಅನೇಕ ದಲಿತ ಕವಿತೆಗಳು ಜಾಥಾ ಚಳವಳಿ, ರ್ಯಾಲಿ, ವಿಚಾರ ಸಂಕಿರಣ, ಸಮ್ಮೇಳನಗಳಲ್ಲಿ ಅವು ಹಾಡುವಂತಾಗಿವೆ. ಮಾತಿಗಿಂತಲೂ ಹಾಡು ಹೆಚ್ಚು ಸಂವಹನಕ್ಕೆ ಒಪ್ಪಿಕೊಳ್ಳುವ ಮಾಧ್ಯಮ ನವೋದಯದ ಗೇಯತೆಗಿಂತಲೂ ಭಿನ್ನವಾಗಿ ದಲಿತ ಕವಿಗಳ ಕಾವ್ಯ ಗೇಯತೆಯನ್ನು ಹೊಂದಿರುವುದು ಇನ್ನೂ ವಿಶಿಷ್ಟವೆನಿಸಿದೆ. ಕಾವ್ಯ ಜನತೆಯದೇ ಆಗಿ, ಕನ್ನಡ ಪರಂಪರೆಯ ಕಾವ್ಯಕ್ಕೆ ಹೊಸ ಚಿಗುರು ಅಷ್ಟೇ ಅಲ್ಲ, ಹೊಸ ಹೂವು, ಹಣ್ಣನ್ನು ನೀಡಿತು ಎನ್ನಬೇಕು.

ದಲಿತ ಕಾವ್ಯದ ಗೇಯತೆ

'ಸಮಾಜಮುಖಿ ಕಾವ್ಯರಚನೆಯಲ್ಲಿ ಕವಿಯು ತನ್ನವರಿಗೆ ಏನನ್ನು ಹೇಳಬೇಕು. ಸಮಾಜದ ಮೇಲೆ ಅದು ಹೇಗೆ ಪ್ರಭಾವ ಬೀರಬೇಕು ಎಂಬ ಉದ್ದೇಶವನ್ನು ಹೊಂದಿರುತ್ತಾನೆ. ಅದಕ್ಕಾಗಿ ತಾನು ಪರಿಣಾಮಕಾರಿಯಾಗುವಂಥ ಮಾಧ್ಯವನ್ನೇ ಆಯ್ದುಕೊಳ್ಳುವನು. ವಿಚಾರಗಳನ್ನು ಪರಿಣಾಮಕಾರಿಗೊಳಿಸುವ ಶಕ್ತಿ ಕಾವ್ಯಕ್ಕೆ ಇದೆ. ಕಾವ್ಯ ಸ್ವಕೀಯ ಪರಕೀಯ ಅನುಭವಗಳನ್ನು ಜೀವನ ಪ್ರೀತಿಯಿಂದ ದಾಖಲಿಸಿಕೊಡುವ ಸೂಕ್ಷ್ಮ ಅಂತರ್ಯಾಣದ ಉತ್ಪನ್ನವಾಗಿದೆ ಎಂದು ಹೇಳಲಾಗುತ್ತದೆ. ಅಷ್ಟೇ ಅಲ್ಲದೆ ಅದು ರಸಗ್ರಹಣಕ್ಕೆ ಸಂಕೇತವಾದುದು ಆಗಿದೆ.

ಕಾವ್ಯ ರಚಿಸುವುದು ಪ್ರಥಮತಃ ಕವಿಗೆ ಅಂತರಂಗದ ಋಷಿಯಾದರೂ, ಓದುಗನ ನಿಲುವಿಗೆ ಅದೊಂದು ಮಾನಸಿಕ ರುಚಿಯಾಗಿ ಪಾಲ್ಗೊಳ್ಳುತ್ತದೆ. ಜೀವ ವಿವೇಚನೆಯ ಪಾತಳಿಯಾಗಿ ಎದುರಾಗುತ್ತದೆ. ಹೀಗೆ ಹಲವು ಕಾರಣಗಳು ಕಾವ್ಯಕ್ಕೆ ಇರುವವು. ಆಧುನಿಕ ಕಾವ್ಯ ಪರಂಪರೆಯ ಭಾಗವಾಗಿಯೇ ಬೆಳೆದುಬಂದ ದಲಿತ ಕಾವ್ಯ ಕನ್ನಡ ಕಾವ್ಯ ಲಕ್ಷಣಗಳನ್ನು ಅರಗಿಸಿಕೊಂಡು ವಿಶಿಷ್ಟವಾಗಿ ಅಭಿವ್ಯಕ್ತಿಯಾಗಿದೆ ಎಂಬುದನ್ನು ಮರೆಯಬಾರದು. ನವೋದಯ ಸಂದರ್ಭದಲ್ಲಿ ಬಿ.ಎಂ.ಶ್ರೀ.ಯವರು ಹೇಳಿರುವ "ಜನವಾಣಿ ಬೇರು ಕವಿವಾಣಿ ಹೂ" ಎಂಬ ಅನ್ವರ್ಥವು ದಲಿತ ಕಾವ್ಯಕ್ಕೂ ಸಲ್ಲುತ್ತದೆ. ಜನಸಾಮಾನ್ಯರನ್ನು ದೃಷ್ಟಿಯಾಗಿಟ್ಟುಕೊಂಡ ರಚನೆಗೊಂಡ ದಲಿತಕಾವ್ಯ ಜನಪದರ ಗೇಯ ಗುಣವನ್ನೂ ಹೊಂದಿದೆ. *ಉದಾ:*

"ನಾಡ ನಡುವಿನಿಂದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ಕೋಟಿ ಕೋಟಿ ಕಪ್ಪು ಜನರ
ಮೊಟ್ಟ ಮೊದಲ ಮಾತೇ
ನೀರಿನಾಚೆ ಮೋಡದಾಚೆ ಮೊಳಗಿದಂಥ
ಘೋಷವೇ" [6]

(ಅಂಬೇಡ್ಕರ್: ಹೊಲೆಮಾದಿಗರ ಹಾಡು ಸಂಕಲನದಿಂದ)

ಈ ಮೇಲಿನ ಕವಿತೆ ಖ್ಯಾತ ದಲಿತ ಕವಿ ಸಿದ್ದಲಿಂಗಯ್ಯನವರದು. ದಲಿತ–ಬಂಡಾಯ ಚಳವಳಿ

ಸಂದರ್ಭದಲ್ಲಿ ಬರೆದದ್ದು. ಸಿದ್ಧಲಿಂಗಯ್ಯನವರ ಇನ್ನೂ ಎಷ್ಟೋ ಕವಿತೆಗಳು. ದಲಿತ ಚಳವಳಿಯ ಸಂದರ್ಭದಲ್ಲಿ ಶಕ್ತಿ ತುಂಬುವ ಗೀತೆಗಳಾಗಿ ಬೆಳೆದವು.

"ಊರ ಹೊರಗೆ ಗಿಡಗಳಲ್ಲಿ
ಹಾಳು ಬಿಡ್ಡ ಭಾವಿಗಳಲ್ಲಿ
ತೂಗಿದವೂ ಮುಂಡಗಳ
ತೇಲಿದವೂ ರುಂಡಗಳು
ಕೊನೆಯಿಲ್ಲದೆ ಈ ಕಥೆಗೆ?
ಬೆಳಕಿಲ್ಲವೆ ನಮ್ಮ ಬದುಕಿಗೆ?" [7]

ಈ ಸಾಲುಗಳು ಇಂದಿಗೂ ದಲಿತರ ಬದುಕು ಭಯದಿಂದಲೇ ಕೂಡಿದೆ ಎಂಬುದನ್ನು ಸಾರುತ್ತವೆ. ಈ ದುಷ್ಟ ವ್ಯವಸ್ಥೆಯ ವಿರುದ್ಧ ಸಾಮಾಜಿಕ ಸಂಘರ್ಷಕ್ಕಾಗಿ ದಲಿತರು ಧ್ವನಿ ಎತ್ತಿದರೆ ಅವರಿಗೆ ಯಾವ ಸ್ಥಿತಿಯು ಒದಗುತ್ತದೆಂಬುದನ್ನು ಅರವಿಂದ ಮಾಲಗತ್ತಿ ಅವರು ಸ್ಪಷ್ಟಪಡಿಸಿದ್ದಾರೆ. ಹಾಗಾದರೆ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ಬಾಬಾ ಸಾಹೇಬ್ ಅಂಬೇಡ್ಕರ ಅವರ ಮೂಲ ಧ್ಯೇಯಗಳು ಇಂದಿಗೂ ಸಹ ಪೂರ್ಣ ಪ್ರಮಾಣದಲ್ಲಿ ಫಲಿತಗಳನ್ನು ಕಾಣಲು ಸಾಧ್ಯವಾಗುತ್ತಿಲ್ಲವೆನಿಸಿದೆ.

ಪ್ರತಿಮೆ–ಸಂಕೇತಗಳು–ರೂಪಕ

ಕವಿತೆಯೊಂದರಲ್ಲಿ ಪ್ರತಿಮೆಯು ಸ್ವತಂತ್ರವಾಗಿ ಬಳಕೆಯಾಗಿದ್ದರೆ, ಅದರದ್ದೇ ಆದ ವೈಶಿಷ್ಟ್ಯಗಳನ್ನು ಗುರುತಿಸಲು ಆಗುವಂತಿದ್ದರೆ, ತನ್ನ ಅರ್ಥವ್ಯಾಪ್ತಿಯನ್ನು ಆ ಪ್ರತಿಮೆಯು ತಾನೇ ನಿರ್ಧರಿಸಿಕೊಳ್ಳುವಂತಿದ್ದರೆ ಆಗ ಅದು ಬಹಳ ಮಟ್ಟಿಗೆ ಒಂದು ಸಂಕೇತವಾಗುತ್ತದೆ.

ಉದಾ: ಒಂದು ಕವಿತೆ ಮರವನ್ನು ವರ್ಣಿಸಬಹುದು, ಅಲ್ಲಿ ಮರ, ಮರದ ಆಕಾರ, ಕೊಂಬೆ. ರೆಂಬೆ, ಬಂದು ಕೂಡುವ ಹಕ್ಕಿ ಇತ್ಯಾದಿಗಳನ್ನು ಚಿತ್ರಿಸಿ ಕವಿಯ ಮನಸ್ಥಿತಿಯನ್ನು ಸೂಚಿಸಬಹುದು. ಇಲ್ಲಿ ನಿಜವಾದ ಮರವನ್ನು ಕುರಿತು ವಾಚ್ಯಾರ್ಥದಲ್ಲಿ ಕವಿ ಹೇಳಿರದೆ ಸೂಚ್ಯಾರ್ಥದಲ್ಲಿ ಮರವನ್ನು ಪ್ರತಿಮೆ–ಸಂಕೇತವಾಗಿಸಿಕೊಂಡು ಒಂದು ಅನುಭವವನ್ನು ಹೇಳಲು ಹೊರಟವನಾಗಿರುತ್ತಾನೆ. ಇಂಥ ಒಂದು ಸಂಕೇತ ಭಾವ ಸೂಚಕ ಪ್ರತಿಮೆಯ ರೂಪ ತಾಳಿ ಇಡೀ ಕವಿತೆಯನ್ನು ಭಾವ ಸ್ಥಿತಿಗೆ ಒಯ್ಯುವುದು. ಹೊಸಗನ್ನಡದ ನವೋದಯ ಕಾವ್ಯ, ನವ್ಯಕಾವ್ಯಗಳು ಅನೇಕ ವಿಭಿನ್ನ ಪ್ರತಿಮೆ ಈ ಸಂಕೇತ ರೂಪಕಗಳಿಂದ ಕಾವ್ಯದ ಅರ್ಥ ಸ್ವಾರಸ್ಯ ದರ್ಶನ ಹೆಚ್ಚಿಸಿರುವಂತೆ ಇವುಗಳ ರೂಪ–ಸ್ವರೂಪ ದಲಿತ ಕಾವ್ಯದಲ್ಲಿಯೂ ಕಾಣುತ್ತೇವೆ.

ಕವಿ ತಾಯ್‌ರಾಜ್ ಮರ್ಚಟ್ಟಾಳ ಅವರ 'ಚರಿತೆ' ಸಂಕಲನದ 'ರಕ್ಷಣೆ' ಎನ್ನುವ ಕವಿತೆಯಲ್ಲಿ ಈ ದೇಶದ ನಿನ್ನ ವರ್ಗ ಜಾತಿಗೆ ಸೇರಿದ ಬಡವರು ಉಳ್ಳವರ ಪಾಲಿಗೆ ಕಾಗೆಗಳು ನಮ್ಮವರ ಶೋಷಣೆಗೆ, ಸಾವಿಗೆ ನಾವೇ ಮರುಗಬೇಕು ಎಂಬುದನ್ನು ಅವರ ಕವಿತೆಯ ಈ ಸಾಲುಗಳು ಧ್ವನಿಸುತ್ತವೆ.

"ವಿದ್ಯುತ್ ಸರ್ಕ್ಯೂಟ್‌ಗೆ
ಸತ್ತ ಕಾಗೆಯ ಸುತ್ತ ಸುತ್ತಾಡಲು
ಹಿಂಡು ಹಿಂಡು
ಕಾಗೆಯ
ಆರ್ತನಾದ"

'ಸತ್ತ ಕಾಗೆ' ಶೋಷಿತರನ್ನು ಸಂಕೇತಿಸುವ ಪ್ರತಿಮೆಯಾಗಿ ಕವಿತೆಯಲ್ಲಿ ಮೂಡಿಬಂದಿದೆ. ನಮ್ಮ ಸಾವಿಗೆ ನಾವೇ ಆರ್ತನಾದ ಮಾಡುವ ಧಾರಣತೆ ಕವಿತೆಯ ಆಶಯವಾಗಿ ತೋರಿದೆ.

ಉಪಸಂಹಾರ

ಸಾವಿರಾರು ವರ್ಷಗಳ ಸುದೀರ್ಘ ಪರಂಪರೆಯ ಹಿನ್ನೆಲೆಯಲ್ಲಿ ಗಮನಿಸಿದರೆ ಆಧುನಿಕ ಕನ್ನಡ ಸಾಹಿತ್ಯ ತುಂಬಾ ವಿಶಿಷ್ಟವೂ, ಸಂಕೀರ್ಣವೂ ಆಗಿದ್ದು ಕಂಡು ಬರುತ್ತದೆ. ಏಕೆಂದರೆ, ಆಧುನಿಕ ಕನ್ನಡ ಸಾಹಿತ್ಯ ತನ್ನ ಪರಂಪರೆ ಮತ್ತು ಬಾಹ್ಯ ಪ್ರೇರಣೆ, ಪ್ರಭಾವಗಳನ್ನು ಅಳವಡಿಸಿಕೊಂಡೂ, ಅದಕ್ಕಿಂತ ಬೇರೆಯಾದ ರೂಪ, ಪ್ರಕಾರಗಳನ್ನು ಸೃಷ್ಟಿಸಿ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದು ಸುಳ್ಳಲ್ಲ.

ಸಾಮಾನ್ಯವಾಗಿ ಹೊಸಗನ್ನಡದ ಉಗಮವನ್ನು ಬ್ರಿಟಿಷ್ ವಸಾಹತುಶಾಹಿ ಆಡಳಿತ ಜಾರಿಗೆ ತಂದ ಹೊಸ ಶಿಕ್ಷಣ ಪದ್ಧತಿ. ಹೊಸ ಹೊಸ ಸಾಹಿತ್ಯ ಪ್ರಕಾರಗಳ ಪ್ರಭಾವದಿಂದ ಆಯಿತೆಂದು ಸಾಮಾನ್ಯವಾಗಿ ಅಭಿಪ್ರಾಯ ವಿದ್ವಾಂಸರಲ್ಲಿ ಕಾಣುತ್ತೇವೆ. ಆದರೆ ಈ ಅಭಿಪ್ರಾಯ ಮೇಲ್ನೋಟಕ್ಕೆ ನಿಜವೇ ಅನ್ನಿಸಿದರೂ ಕೂಡ ಸಂಪೂರ್ಣ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕ ಬೇರೆ ಬೇರೆ ಆಡಳಿತ ವ್ಯವಸ್ಥೆಯಲ್ಲಿ ಹರಿದು ಹಂಚಿ ಹೋಗಿತ್ತೆಂಬುದನ್ನು ಬಲ್ಲೆವು. ಹೀಗಿದ್ದಾಗ ಜನಜೀವನ, ಆಡಳಿತ, ಶಿಕ್ಷಣ, ಸಾಹಿತ್ಯ ಕಲೆ. ಸಂಸ್ಕೃತಿಗಳ ಮೇಲೆ ಇಸ್ಲಾಂ ಧರ್ಮ, ಉರ್ದು, ಪರ್ಶಿಯನ್, ಮರಾಠಿ ಭಾಷೆಗಳ ಪ್ರಭಾವ ನಿಚ್ಚಳವಾಗಿತ್ತು. ಇಲ್ಲಿ ಕನ್ನಡ ಕೇವಲ ಮನೆ ಭಾಷೆಯಾಗಿ ಬಳಸಲ್ಪಡುತ್ತಿರುವುದರಿಂದಾಗಿ ಆ ಘಟ್ಟದಲ್ಲಿ ಸಾಹಿತ್ಯ ಚಟುವಟಿಕೆಗಳು ರಚನೆಯಾಗಿ ಅಷ್ಟಾಗಿ ಬೆಳೆದುಬರಲಿಲ್ಲ ಎಂದು ಹೇಳಬಹುದು.

ಆಧುನಿಕ ಕನ್ನಡ ಸಂದರ್ಭದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಹಾಗೂ ಬಂಡಾಯೋತ್ತರಗಳೆಂಬ ಕಾಲಘಟ್ಟಗಳ ಸನ್ನಿವೇಶಗಳನ್ನು ನಿರ್ಮಾಣ ಮಾಡಿಕೊಳ್ಳುತ್ತ ಸುದೀರ್ಘವಾಗಿ ಬೆಳೆದುಬಂದಿದ್ದೆ ಆದರೆ, ಕವಿಗಳು ಈ ಸಾಹಿತ್ಯ ಘಟ್ಟಗಳ ಜೊತೆಗೆ ತಮ್ಮನ್ನು ಗುರುತಿಸಿಕೊಂಡು ಸಾಹಿತ್ಯ ರಚನೆ ಮಾಡುತ್ತ ಬಂದಿರುವುದನ್ನು ಗಮನಿಸಿದರೆ ನಮಗೆ ತುಂಬಾ ನಿರಾಶೆಯುಂಟಾಗುತ್ತದೆ. ಏಕೆಂದರೆ ಸ್ವಾತಂತ್ರ್ಯಪೂರ್ವದಿಂದ ಹಿಡಿದು ಸ್ವಾಂತಂತ್ರ್ಯ ಬಂದು ಸುಮಾರು ಎರಡು ದಶಕಗಳವರೆಗೆ ಕನ್ನಡ ಶಿಕ್ಷಣ ಮರೀಚಿಕೆಯಾಗಿತ್ತು. 1956ರಲ್ಲಿ ಕರ್ನಾಟಕ ರಾಜ್ಯ ನಿರ್ಮಾಣಗೊಂಡ ನಂತರ ಕನ್ನಡ ಭಾಷೆ ಶಿಕ್ಷಣದ ಮಾಧ್ಯಮ ಭಾಷೆಯಾಯಿತು.

ಅರವತ್ತು–ಎಪ್ಪತ್ತರ ದಶಕದ ಸುಮಾರಿಗೆ ಕನ್ನಡ ಮಾಧ್ಯಮ ಶಿಕ್ಷಣದ ಸೌಲಭ್ಯವನ್ನು ಪಡೆದುಕೊಂಡ ಹೋರಾಟ ಮನೋಭಾವದ ಕವಿ, ಲೇಖಕರು ಈವರೆಗೆ ಬೆಳೆದುಬಂದಿದ್ದ ವಿವಿಧ ಕಾಲಘಟ್ಟಗಳ ಸಾಹಿತ್ಯವನ್ನು ಪರಿಚಯಿಸಿಕೊಂಡರು. ಕನ್ನಡದಲ್ಲಿ ತಾವೂ ಬರೆಯಲು ತೊಡಗಿದರು. ಹೊಸ ತಲೆಮಾರಿನ ಯುವ ಕವಿ, ಲೇಖಕರು ತಮ್ಮ ಬರವಣಿಗೆ ಪ್ರಾರಂಭಿಸಿದ ಸಂದರ್ಭದಲ್ಲಿ ಕನ್ನಡ ಸಾಹಿತ್ಯವು ನಾಲ್ಕನೆಯ ಘಟ್ಟವಾದ ದಲಿತ–ಬಂಡಾಯದ ಏರಿಕೆಯ ಕಾಲದಲ್ಲಿತ್ತು ಎಂದು ಹೇಳಬಹುದಾಗಿದೆ.

ಕೊನೆಟಿಪ್ಪಣಿಗಳು

1. ಪೂಜಾರ, ವಿ.ಜಿ. (2008). *ಕನ್ನಡ ವ್ಯಾಕರಣ ಮತ್ತು ಭಾಷೆ.* ಚೇತನ ಪ್ರಕಾಶನ. ಪುಟ. 85.
2. ಅದೇ. ಪುಟ.85
3. ಶಿವರುದ್ರಪ್ಪ, ಜಿ.ಎಸ್. (1982). *ಪ್ರತಿಕ್ರಿಯೆ.* ಪುರೋಗಾಮಿ ಪ್ರಕಾಶನ. ಮೈಸೂರು. ಪುಟ. 26,
4. ಗುಂಡಣ್ಣ ಕಲಬುರ್ಗಿ. (2000). *ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ.* ಸೌಜನ್ಯ ಪ್ರಕಾಶನ. ಪುಟ.3.
5. ನಾಗಭೂಷಣ ಸ್ವಾಮಿ, ಓ.ಎಲ್. (1983). *ವಿಮರ್ಶೆಯ ಪರಿಭಾಷೆಯಲ್ಲಿ.* ಪರಿಸರ ಸಾಹಿತ್ಯ ಪ್ರಕಾಶನ, ಪುಟ. 51,
6. ಸಿದ್ದಲಿಂಗಯ್ಯ. (2010). *ನನ್ನ ಜನಗಳ ಮತ್ತಿತರ ಕವಿತೆಗಳು.* ಕನ್ನಡ ಸಂಸ್ಕೃತಿ ಇಲಾಖೆ, ಪುಟ. 27
7. ಅರವಿಂದ ಮಾಲಗತ್ತಿ. (1981). *ಮೂಕನಿಗೆ ಬಾಯಿ ಬಂದಾಗ.* ಚೇತನ ಬುಕ್‌ಹೌಸ್, ಪುಟ.40.